ಸಾಕ್ಷಿಯ ಹೆಸರುಃ ಕಾರ್ತಿಕ್ ಕುಮಾರ್ ಸಿ.ಪಿ.

ದಿನಾಂಕ 02-07-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ 1 ರಿಂದ 5 ನೇ ಪ್ರತಿವಾದಿ ಪರ ಶ್ರೀ ಕೆ.ಆರ್.ಸಿ. ವಕೀಲರಿಂದಃ

1) ನಮ್ಮ ಕುಟುಂಬದ ವಂಶವೃಕ್ಷದ ನೋಟರಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ-01 ಎಂದು ಗುರುತಿಸಲಾಯಿತು.

2) ಪ್ರತಿವಾದ ಪತ್ರದ ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಿಸಿದ ಇಂಡೆಕ್ಸ್ ಆಫ್ ಲ್ಯಾಂಡ್ಸ್ ಮತ್ತು ರೆಕಾರ್ಡ್ ಆಫ್ ರೈಟ್ಸ್ ಅವುಗಳನ್ನು ನಿಡಿ-02 ಮತ್ತು ನಿಡಿ-03 ಎಂದು,

3) ಪ್ರತಿವಾದ ಪತ್ರದ ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಿಸಿದ 06 ಕೈ ಬರವಣಿಗೆಯ ಮತ್ತು ಒಂದು ಗಣೀಕೃತ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ 04 ರಿಂದ ನಿಡಿ-10 ಎಂದು,

4) ಪ್ರತಿವಾದ ಪತ್ರದ 'ಎ' ಷೆಡ್ಯೂಲ್ ಸ್ವತ್ತಾದ ಸರ್ವೆ ನಂ.14/1 ರಲ್ಲಿನ 26.08 (26.1/2) ಗುಂಟೆ ಜಮೀನನ್ನು ದಿನಾಂಕಃ24.05.2000 ರಂದು ತಮ್ಮಯ್ಯನಾಯಕರವರಿಗೆ ಸ್ವಾಮಿನಾಯಕ ಮತ್ತು ಅವರ ಮೈನರ್ ಮಗನಾದ ಗೋವಿಂದರಾಜುರವರು ಬರೆದುಕೊಟ್ಟ ಕ್ರಯಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ-11 ಎಂದು,

5) ಪ್ರತಿವಾದ ಪತ್ರದ 'ಎ' ಷೆಡ್ಯೂಲ್ ಸ್ವತ್ತಾದ ಸರ್ವೆ ನಂ.14/1 ರಲ್ಲಿನ 26.08 ಗುಂಟೆ ಜಮೀನನ್ನು ದಿನಾಂಕಃ01.03.2011 ರಂದು ತಮ್ಮಯ್ಯನಾಯಕರವರಿಗೆ ಮಲ್ಲೇಶ ಮತ್ತು ಅವರ ಹೆಂಡತಿ ಶ್ರೀಮತಿ ನಾಗವೇಣಿರವರು ಬರೆದುಕೊಟ್ಟ ದಾನಪತ್ರ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-12 ಎಂದು,

6) ಕಾವಲು ಹೊಸೂರು ಗ್ರಾಮದ ಸರ್ವೆ ನಂ.14/3 ಗೆ ಸಂಬಂಧಿಸಿದ ಗಣೀಕೃತ ಪಹಣಿಪತ್ರಿಕೆಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-13 ಎಂದು,

7) ಚಿಕ್ಕ ಭೇರ್ಯ ಗ್ರಾಮದ ಸರ್ವೆ ನಂ.16/1 ಕ್ಕೆ ಸಂಬಂಧಿಸಿದ ಇಂಡೆಕ್ಸ್ ಆಫ್ ಲ್ಯಾಂಡ್ಸ್ ಮತ್ತು ರೆಕಾರ್ಡ್ ಆಫ್ ರೈಟ್ಸ್ ಅನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-14 ಮತ್ತು 15 ಎಂದು,

08) ಚಿಕ್ಕ ಭೇರ್ಯ ಗ್ರಾಮದ ಸರ್ವೆ ನಂ.16/1 ಕ್ಕೆ ಸಂಬಂಧಿಸಿದ 6 ಕೈ ಬರಹ ಪಹಣಿ ಪತ್ರಿಕೆಗಳನ್ನು ಹಾಗೂ 1 ಗಣೀಕೃತ ಪಹಣಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಡಿ16 ರಿಂದ ನಿಡಿ-22 ಎಂದು,

09) ದಿನಾಂಕಃ03.05.2006 ರಂದು ಸರ್ವೆ ನಂ.16/1 ರಲ್ಲಿನ 1 ಎಕರೆ 04 ಗುಂಟೆ ಜಮೀನನ್ನು ಶ್ರೀಮತಿ ಯಶೋಧಮ್ಮ ಹಾಗೂ ರಾಜಾನಾಯಕ್ ಅವರ ಮೈನರ್ ಮಕ್ಕಳಾದ ಶೃತಿ, ಆನಂದ್ ರವರು ಸೇರಿ ಶ್ರೀಮತಿ ಶಮೀನಾ ಬಾನು ಬಿನ್ ನಜೀರ್ ಷರೀಫ್ ರವರಿಗೆ ಮಾರಾಟ ಮಾಡಿದ್ದು ಸದರಿ ಕ್ರಯಪತ್ರದ ಆನ್‌ಲೈನ್ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-23 ಎಂದು ಗುರುತಿಸಲಾಯಿತು.

10) ಚಿಕ್ಕ ಭೇರ್ಯ ಗ್ರಾಮದ ಸರ್ವೆ ನಂ.16/4 ಗೆ ಸಂಬಂಧಿಸಿದ ಒಂದು ಗಣೀಕೃತ ಪಹಣಿ ಪತ್ರಿಕೆ ಮತ್ತು ಸರ್ವೆ ನಂ.788/65 ಎ ಗೆ ಸಂಬಂಧಿಸಿದ 04 ಗಣೀಕೃತ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಡಿ24 ರಿಂದ ನಿಡಿ-28 ಎಂದು,

ಆದ್ದರಿಂದ ದಾವೆಯನ್ನು ವಜಾ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಸಮಯ ನೀಡಿ ಪಾಟೀ ಸವಾಲು ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಓ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.